**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆಃ 645/2023**

**ಸಾಕ್ಷಿಯನ್ನು ದಿಃ 10.06.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ರಮೇಶ್ ಆರ್ | ಸಿಡಬ್ಲ್ಯೂಃ 4 | ಪಿಡಬ್ಲ್ಯೂಃ 3 |
| ತಂದೆಯ ಹೆಸರು | ರವಿ | | |
| ವಯಸ್ಸು | 26 ವರ್ಷ | | |
| ಕೆಲಸ | ವ್ಯಾಪಾರ | | |
| ವಾಸಸ್ಥಳ | ಕರೀಗೌಡರ ಬೀದಿ, ಹುಣಸೂರು. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಚಾಸಾ–2 ಮತ್ತು 3 ಗೊತ್ತು. ಚಾಸಾ–5 ಗೊತ್ತಿಲ್ಲ. ಮೃತ ಮಂಜುನಾಥ ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿದ್ದೇನೆ. ಸಾಕ್ಷಿ ಸ್ಥಳ ಪಂಚನಾಮೆಯಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ–10 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ–10(ಎ) ಎಂದು ಗುರುತಿಸಲಾಯಿತು. ಪೋಲಿಸ್ ಠಾಣೆಗೆ ಹೋಗಿ ಹೇಳಿಕೆ ನೀಡಿದ್ದೇನೆ. ದಿಃ 05.09.2023 ರಂದು ಸಂಜೆ ಸುಮಾರು 7–00 ರಿಂದ 7.10 ಗಂಟೆಗೆ ನಾನು ಚಾಸಾ–5 ರವರೊಂದಿಗೆ ನ್ಯಾಯಾಲಯದ ಆಚೆ ಇರುವ ಮಾರುತಿ ಬಡಾವಣೆಯ ಹತ್ತಿರ ಇರುವ ಟೀ ಕ್ಯಾಂಟಿನ್ ನಲ್ಲಿ ಟೀ ಕುಡಿಯುತ್ತಾ ಇದ್ದೆ. ಆಗ ಮೈಸೂರು ಕಡೆಯಿಂದ ಹುಣಸೂರು ಕಡೆಗೆ ಬುಲೆಟ್ ಬೈಕಿನಲ್ಲಿ ಮೃತ ಮಂಜುನಾಥರವರು ಚಾಸಾ–3 ರವರೊಂದಿಗೆ ಬರುತ್ತಿದ್ದರು. ಸದರಿ ಬೈಕ್ ನ್ಯಾಯಾಲಯದ ಮುಂದೆ ರಸ್ತೆಯಲ್ಲಿ ಒಂದು ಟ್ರಾಕ್ಟರ್ ಹಿಂದೆ ಬರುತ್ತಿದ್ದಾಗ ಮಡಿಕೇರಿ ಕಡೆಯಿಂದ ಮೈಸೂರು ಕಡೆಗೆ ಒಂದು ಪೋಲೋ ಕಾರು ಅತೀ ವೇಗವಾಗಿ ಬಂದು ಬುಲೆಟ್ ಬೈಕಿಗೆ ಡಿಕ್ಕಿಪಡಿಸಿತು. ತಕ್ಷಣ ನಾವೆಲ್ಲರೂ ಹೋಗಿ ನೋಡಿದಾಗ, ಬೈಕ್ ಸವಾರ ಮಂಜುನಾಥರವರು ಚಾಸಾ–2 ರವರ ಅಣ್ಣನ ಮಗ ಎಂದು ಗೊತ್ತಾಯಿತು. ನಾನು ತಕ್ಷಣ ಚಾಸಾ–2 ರವರಿಗೆ ಫೋನ್ ಮಾಡಿ ವಿಷಯ ತಿಳಿಸಿದೆ. ಅವರು ಸ್ಥಳಕ್ಕೆ ಬಂದರು. ನಂತರ

ಸಾರ್ವಜನಿಕರ ಸಹಾಯದಿಂದ ಗಾಯಾಳುಗಳನ್ನು ಆಸ್ಪತ್ರೆಗೆ ಕಳುಹಿಸಿಕೊಟ್ಟೆವು. ಮಂಜುನಾಥರವರ ತಲೆಗೆ, ಕತ್ತು ಹಾಗೂ ಕೈ ಕಾಲಿಗೆ ಏಟಾಗಿತ್ತು. ಚಾಸಾ-3 ರವರ ತಲೆಗೆ ಏಟಾಗಿತ್ತು. ಕಾರಿನ ಸಂಃ KA-09-MA 7212 ನೀಲಿ ಬಣ್ಣದಾಗಿತ್ತು. ಬೈಕ್ ನಂಃ KA-45-EC-6673 ಆಗಿತ್ತು. ಅದು ಕಪ್ಪು ಬಣ್ಣದ ಬುಲೆಟ್ ಬೈಕ್ ಆಗಿತ್ತು. ಗಾಯಾಳುವನ್ನು ಹುಣಸೂರು ಪಟ್ಟಣದ ಕಾವೇರಿ ಆಸ್ಪತ್ರೆಗೆ ದಾಖಲಿಸಿದೆವು. ಮಂಜುನಾಧ,ರವರನ್ನು ಹೆಚ್ಚಿನ ಚಿಕಿತ್ಸೆಗೆ ಮೈಸೂರು ಆಸ್ಪತ್ರೆಗೆ ಸೇರಿಸಿದರು. ದಿಃ 07.09.2023 ರಂದು ಮಂಜುನಾಥರವರು ತೀರಿಕೊಂಡರು ಎಂದು ನನ್ನ ಸ್ನೇಹಿತರು ಹೇಳಿದರು.

ದಿಃ 08.09.2023 ರಂದು ಪೋಲಿಸರು ಅಪಘಾತದ ಸ್ಥಳಕ್ಕೆ ಬಂದಾಗ ನಾನು ಹಾಜರಿದ್ದು ಅಪಘಾತದ ಸ್ಥಳ ತೋರಿಸಿದ್ದೇನೆ. ಆ ಸಮಯದಲ್ಲಿ ಚಾಸಾ--13 ಮತ್ತು ಇನ್ನೊಬ್ಬರು ಇದ್ದರು. ಅವರ ಹೆಸರು ನೆನಪಾಗುತ್ತಿಲ್ಲ. ಮಹಜರನ್ನು ಬೆಳಿಗ್ಗೆ 10-30 ರಿಂದ 12-00 ಗಂಟೆಯವರೆಗೆ ಮಾಡಿದರು. ನಿಪಿ-10(ಎ) ಸಹಿಯನ್ನು ಅಪಘಾತದ ಸ್ಥಳದಲ್ಲಿ ಹಾಕಿದ್ದೇನೆ. ವಾಹನಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿಪಿ-2 ರಿಂದ 9 ರ ಭಾವಚಿತ್ರಗಳಲ್ಲಿ ಕಾರು ಮತ್ತು ಬೈಕನ್ನು ನೋಡಿ ಗುರುತಿಸುತ್ತಾರೆ. ದಿನಾಂಕಃ 09.09.2023 ರಂದು ಪೋಲಿಸರ ಮುಂದೆ ಈ ಬಗ್ಗೆ ಹೇಳಿಕೆ ನೀಡಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

## ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ

ಮಂಜುನಾಥರವರು ಮೃತಪಟ್ಟ ವಿಚಾರ ಚಾಸಾ-2 ರವರಿಂದ ನನಗೆ ತಿಳಿಯಿತು ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಮಹಜರು ಸಮಯದಲ್ಲಿ ಚಾಸಾ-13 ರವರ ಜೊತೆ ಚಾಸಾ-12 ಕೂಡ ಇದ್ದರು ಎಂದರೆ ಸರಿ.

<u>ಪಾಟೀ ಸವಾಲು:</u> **ಆರೋಪಿ ಪರ ಶ್ರೀ. ಎಸ್.ಎನ್.ಕೆ. ವಕೀಲರಿಂದ:**

ಚಾಸಾ–2 ನನ್ನ ಸಂಬಂಧಿ ಅಲ್ಲ. ಆದರೆ ಪರಿಚಿತರು. ಟ್ರ್ಯಾಕ್ಟರ್ ಮೈಸೂರುನಿಂದ ಹುಣಸೂರು ಕಡೆಗೆ ಬರುತ್ತಿತ್ತು. ಬುಲೆಟ್ ಟ್ರ್ಯಾಕ್ಟರ್ ನ ಹಿಂಭಾಗ ಬರುತ್ತಿತ್ತು. ಹುಣಸೂರಿನಲ್ಲಿ ಮೈಸೂರು ಮಡಿಕೇರಿ ರಸ್ತೆಯ ಮಧ್ಯೆ ರಸ್ತೆ ವಿಭಜಕ ಇಲ್ಲ ಎಂದರೆ ಸರಿ. ಎರಡೂ ಕಡೆಯಿಂದ ವಾಹನಗಳು ಸಂಚರಿಸುತ್ತವೆ. ನ್ಯಾಯಾಲಯದ ಮುಂದೆ ಮೈಸೂರು ಮಡಿಕೇರಿ ರಸ್ತೆ ಕಿರಿದಾಗಿದೆ ಎಂದರೆ ಸರಿ. ಅಪಘಾತದ ಸ್ಥಳದಲ್ಲಿ ರಸ್ತೆ ದಿಬ್ಬ ಹಾಕಿದ್ದಾರೆ ಎಂದರೆ ಇಲ್ಲ. ಒಂದು ಟ್ರ್ಯಾಕ್ಟರ್ ಟ್ರೇಲರ್ ನೊಂದಿಗೆ ಸಂಚರಿಸುವಾಗ ನಿಧಾನ ಗತಿಯಲ್ಲಿ ಹೋಗತ್ತದೆ ಎಂದರೆ ಸರಿ.

ಟೀ ಕ್ಯಾಂಟಿನ ಹೆಸರು ಈಗ ನೆನಪಿಲ್ಲ. ನಾನು ಹೇಳುವ ಟೀ ಕ್ಯಾಂಟಿನ್ ಮೈಸೂರಿನಿಂದ ಹುಣಸೂರಿಗೆ ಬರುವಾಗ ರಸ್ತೆಯ ಎಡಭಾಗದಲ್ಲಿ ಇದೆ. ನ್ಯಾಯಾಲಯದ ಮುಂದೆ ರಸ್ತೆಯ ಫುಟ್‌ಪಾತ್ ನಲ್ಲಿ ಯಾವುದೇ ಟೀ ಕ್ಯಾಂಟಿನ್ ಗಳು ಇಲ್ಲ ಎಂದರೆ ಸರಿಯಲ್ಲ. ಅಪಘಾತದ ಸ್ಥಳದಿಂದ ನಾನಿದ್ದ ಜಾಗ ಸುಮಾರು 25 ಹೆಜ್ಜೆ ದೂರ ಇದೆ. ರಸ್ತೆಯಲ್ಲಿ ವಾಹನ ದಟ್ಟಣೆ ಇದ್ದಾಗ 25 ಹೆಜ್ಜೆ ದೂರದಲ್ಲಿ ಟೀ ಕುಡಿಯುತ್ತಿದ್ದರೆ ರಸ್ತೆಯಲ್ಲಿ ಏನಾಗುತ್ತಿದೆ ಎಂದು ಗೊತ್ತಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ರಸ್ತೆಯನ್ನು ನೋಡಿಕೊಂಡು ಯೋಚಿಸುತ್ತಾ ಟೀ ಕುಡಿಯುತ್ತಿದ್ದೆ. ನನಗೆ ಶಬ್ದ ಕೇಳಿಸಿತು. ಅಪಘಾತದ ಶಬ್ದ ಕೇಳಿಸಿತು. ಅಪಘಾತ ಹೇಗಾಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ನೋಡಿದ್ದೇನೆ. ನಾನು ಸ್ಥಳಕ್ಕೆ ಹೋದ ನಂತರ ಟ್ರಾಫಿಕ್ ಜಾಮ್ ಆಯಿತು. ಅಪಘಾತವಾದ ನಂತರ ಉಳಿದ ವಾಹನಗಳು ಸಂಚರಿಸುತ್ತಿದ್ದವು. ನಾನು ಕ್ಯಾಂಟೀನ್ ನಲ್ಲಿ ಟೀ ಕುಡಿಯುತ್ತಿರಲಿಲ್ಲ ಮತ್ತು ಅಪಘಾತವನ್ನು ನೋಡಿಲ್ಲ ಎಂದರೆ ಸರಿಯಲ್ಲ. ಮಂಜುನಾಥರವರು ಟ್ರ್ಯಾಕ್ಟರನ್ನು ಹಿಂದಿಕ್ಕಲು ಹೋಗಿ ಬೈಕನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಸ್ವತಃ ಕಾರಿಗೆ ಡಿಕ್ಕಿ ಪಡಿಸಿದ್ದಾರೆ ಎಂದರೆ ಸರಿಯಲ್ಲ. ಮಂಜುನಾಥರವರ ತಪ್ಪಿನಿಂದ ಅಪಘಾತವಾಗಿದೆ ಎಂದು ಗೊತ್ತಿದ್ದರೂ ಕೂಡ ಅವರ ಕುಟುಂಬಕ್ಕೆ ಪರಿಹಾರ ಸಿಗಲೀ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

ನಾನು ಸ್ಥಳಕ್ಕೆ ಭೇಟಿ ಕೊಟ್ಟಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಸ್ಥಳಮಹಜರು ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ–10ರ ಮಹಜರಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪೋಲಿಸ್ ಠಾಣೆಯಲ್ಲಿ ನಿಪಿ–10 ಕ್ಕೆ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಮೃತ ಮಂಜುನಾಥರವರ ಕುಟುಂಬಕ್ಕೆ ಪರಿಹಾರಕ್ಕೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಕಾಲಾವಕಾಶ ಕೇಳಿದ್ದು, ಸಕಾರಣ ಇಲ್ಲದಿರುವುದರಿಂದ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

**<u>ಪಾಟೀಸವಾಲು:</u> ಆರೋಪಿ ಪರ ವಕೀಲರು ಇಲ್ಲವೆಂದಿದ್ದಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.